## 2016 ಕ.ತೀ.ವ 164

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಬಿ. ಬಜಂತ್ರಿ

### ಶ್ರೀ ಎಸ್.ವಿ. ರಮೇಶ್ –ವಿರುದ್ಧ– ಕರ್ನಾಟಕ ರಾಜ್ಯ ಸರ್ಕಾರ, ಪ್ರಧಾನ ಕಾರ್ಯದರ್ಶಿಯವರಿಂದ ಪ್ರತಿನಿಧಿತ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಮತ್ತು ಇನ್ನೊಬ್ಬರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227 ರಡಿಯಲ್ಲಿ ರಿಟ್ ಅರ್ಜಿ.

**ದಿನಾಂಕ 29.05.2014 ರ ಸರ್ಕಾರದ ಆದೇಶ ಪತ್ರದನ್ವಯ ಉಪಲೋಕಾಯುಕ್ತರಿಗೆ ಅರ್ಜಿದಾರರ ವಿರುದ್ಧ ಶಿಸ್ತು ಪರಿಪಾಲನಾ ನಡವಳಿಗಳನ್ನು ನಡೆಸಲು ಜವಾಬ್ದಾರಿಯನ್ನು ವಹಿಸಿ 1 ಮತ್ತು 2 ನೇ ಎದುರುದಾರರು ಅರ್ಜಿದಾರರ ವಿರುದ್ಧ ಸಲ್ಲಿಸಿದ ಆರೋಪ ಪಟ್ಟಿಯನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.**

**ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಡಿಯಲ್ಲಿ ಮೊದಲನೇ ಎದುರುದಾರರಿಗೆ ಕಳುಹಿಸಲ್ಪಟ್ಟ ವರದಿಯನ್ನು ಸಶಕ್ತ ಪ್ರಾಧಿಕಾರವು ಕೂಲಂಕುಶವಾಗಿ ಪರಿಶೀಲಿಸಬೇಕೆಂದು ಕಾಯಿದೆಯ ಕಲಂ 12(4) ಆಜ್ಞಾಪಿಸುತ್ತದೆ. ಸರ್ಕಾರೀ ಆದೇಶವನ್ನು ಪರಿಶೀಲಿಸಿಲ್ಲವೆಂಬುದು ಸ್ಫಟಿಕದಂತೆ ಪಾರದರ್ಶಕವಾಗಿದೆ. 1964ರ BWSSB ಕಾಯಿದೆಯಡಿಯಲ್ಲಿ ಮಂಡಳಿಯ ನೌಕರರ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲು ಸರ್ಕಾರಕ್ಕೆ ಸಶಕ್ತತೆಯನ್ನು ನೀಡುವ ಯಾವುದೇ ಉಪಲಬ್ಧತೆಗಳಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಿದೆ.**

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. 1999 (2) ಎಸ್‌ಸಿಸಿ 10<br>ಕುಲದೀಪ್ ಸಿಂಗ್ –ವಿರುದ್ಧ–<br>ಕಮೀಷನರ್ ಆಫ್ ಪೊಲೀಸ್* | *(ಉಲ್ಲೇ) 7* |

*ರಿಟ್ ಅರ್ಜಿ ಸಂ. 30703/2014 (ಎಸ್–ಡಿಇ), ದಿನಾಂಕ: 13ನೇ ಮಾರ್ಚ್, 2015.

2. *ಡಬ್ಲ್ಯೂಪಿ 25502/2005*
   *ದಿ: 15–9–2008 ರಂದು ವಿಲೆ ಮಾಡಿದೆ*
   *ಡಿ. ಮನು ಮತ್ತು ಇನ್ನೊಬ್ಬರು –ವಿರುದ್ಧ–*
   *ಕರ್ನಾಟಕ ರಾಜ್ಯ* (ಉಲ್ಲೇ) 7
3. *ಡಬ್ಲ್ಯೂ.ಪಿ.ಸಂ. 36932/99*
   *ಕೆ.ಎಸ್. ಶ್ರೀನಿವಾಸನ್ –ವಿರುದ್ಧ–*
   *ಕರ್ನಾಟಕ ರಾಜ್ಯ ಮತ್ತು ಇತರರು* (ಉಲ್ಲೇ) 7
4. *(2009) 5 ಎಸ್‌ಸಿಸಿ 545*
   *ನಾಯರ್ ಸರ್ವೀಸ್ ಸೊಸೈಟಿ –ವಿರುದ್ಧ–*
   *ಡಾ. ಓ. ಬೀರ್ಮಸ್ತಾನ್* (ಉಲ್ಲೇ) 9
5. *(2011) 5 ಎಸ್‌ಸಿಸಿ 142*
   *ಛೇರಮನ್–ಕಮ್–ಮ್ಯಾನೇಜಿಂಗ್ ಡೈರಕ್ಟರ್,*
   *ಕೋಲ್ ಇಂಡಿಯಾ ಲಿಮಿಟೆಡ್ ಮತ್ತು ಇತರರು* (ಉಲ್ಲೇ) 19
6. *(2004) 6 ಎಸ್‌ಸಿಸಿ 440*
   *ಕ್ಯಾಪ್ಟನ್ ಸುಬೇ ಸಿಂಗ್ –ವಿರುದ್ಧ–*
   *ಲೆಫ್ಟಿನೆಂಟ್ ಗವರ್ನರ್ ಆಫ್ ದೆಹಲಿ* (ಉಲ್ಲೇ) 19
7. *(2011) 5 ಎಸ್‌ಸಿಸಿ 435*
   *ಜಾಯಿಂಟ್ ಆಕ್ಷನ್ ಕಮಿಟಿ ಆಫ್ ಏರ್‌ಲೈನ್*
   *ಪೈಲಟ್ಸ್ ಅಸೋಸಿಯೇಷನ್ ಆಫ್ ಇಂಡಿಯಾ*
   *–ವಿರುದ್ಧ– ಡಿ.ಜಿ. ಆಫ್ ಸಿವಿಲ್ ಏವಿಯೇಷನ್* (ಉಲ್ಲೇ) 19
8. *(2012) 5 ಎಸ್‌ಸಿಸಿ 242*
   *ವಿಜಯ್ ಸಿಂಗ್ –ವಿರುದ್ಧ– ಉತ್ತರ ಪ್ರದೇಶ*
   *ರಾಜ್ಯ ಮತ್ತು ಇತರರು* (ಉಲ್ಲೇ) 19
9. *ಎಐಆರ್ 2014 ಎಸ್‌ಸಿ 88*
   *ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು*
   *–ವಿರುದ್ಧ– ಬಿ.ವಿ. ಗೋಪಿನಾಥ್* (ಉಲ್ಲೇ) 19

ಅರ್ಜಿದಾರರ ಪರ: ಶ್ರೀ ಎಂ.ಎಸ್. ಭಾಗವತ್, ನ್ಯಾಯವಾದಿ;
1ನೇ ಪ್ರತ್ಯರ್ಜಿದಾರರ ಪರ: ಶ್ರೀಮತಿ ಪ್ರತಿಮಾ ಹೊನ್ನಾಪುರ, ಹೆಚ್‌ಸಿಜಿಪಿ,
2ನೇ ಪ್ರತ್ಯರ್ಜಿದಾರರ ಪರ: ಶ್ರೀ ಮಲ್ಲಿಕಾರ್ಜುನ್ ಸಿ. ಬಸರೆಡ್ಡಿ, ನ್ಯಾಯವಾದಿ

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಪಿ.ಬಿ. ಬಜಂತ್ರಿ:**

ಅರ್ಜಿದಾರರಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಉಪಲೋಕಾಯುಕ್ತರಿಗೆ ಶಿಸ್ತು ವ್ಯವಹರಣೆಗಳನ್ನು ವಹಿಸಲಾದ ದಿನಾಂಕ 29.05.2014 ರ ಸರ್ಕಾರೀ ಆದೇಶವನ್ನು ಮತ್ತು ಅನುಬಂಧ–''ಎ'' ಹಾಗೂ ಅನುಬಂಧ–''ಬಿ'' ಅನುಸಾರ ಅನುಕ್ರಮವಾಗಿ 1 ಮತ್ತು 2ನೇ ಪ್ರತಿವಾದಿಗಳು ಸಲ್ಲಿಸಿದ ದಿನಾಂಕ 12.06.2014ರ ಆರೋಪ ಪಟ್ಟಿಯನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ.

2. ಅರ್ಜಿದಾರರು 29.09.1998 ರಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಸಂಕ್ಷಿಪ್ತವಾಗಿ ''ಮಂಡಳಿ'') ಯಲ್ಲಿ ಸಹಾಯಕ ಎಂಜಿನಿಯರ್ ಆಗಿ ನೇಮಕಗೊಂಡರೆಂದು ಹೇಳಲಾಗಿದೆ. 27.10.2007 ರಂದು ಮಂಡಳಿಯು ಅವರಿಗೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಹುದ್ದೆಗೆ ಬಡ್ತಿ ನೀಡಿತು (ಅನುಬಂಧ–ಸಿ1).

3. ಅರ್ಜಿದಾರರು 01.09.2008 ರಿಂದ 15.06.2009 ರ ವರೆಗಿನ ಅವಧಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ (ಸಂಕ್ಷಿಪ್ತವಾಗಿ, ''ಬಿಬಿಎಂಪಿ'') ಪ್ರತಿನಿಯೋಜನೆಯ ಮೇಲಿದ್ದರು. ಸಂ. ಬಿ/7, 17, 1ನೇ ಮುಖ್ಯರಸ್ತೆ, 5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–ವಿಳಾಸದ ನಿವೇಶನದಲ್ಲಿ, ಸಾರ್ವಜನಿಕ ಉದ್ಯಾನವನವನ್ನು ಒತ್ತುವರಿ ಮಾಡಿಕೊಂಡು ಹೈ–ಟೆನ್ಷನ್ ತಂತಿ ಹಾದುಹೋಗಿರುವುದರ ಕೆಳಗೆ ಅನಧಿಕೃತ ಕಟ್ಟಡ ನಿರ್ಮಾಣವಾಗುತ್ತಿದೆಯೆಂದು

ಆಪಾದಿಸಿ, ಆ ಬಗ್ಗೆ ಅರ್ಜಿದಾರ ಮತ್ತು ಇತರರು ನಿಷ್ಕ್ರಿಯವಾಗಿರುವ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಚೇರಿಗೆ ದೂರು ಬಂದಿತ್ತು. ದೂರನ್ನು ಸಂ.472, 8ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–ವಿಳಾಸದ ನಿವಾಸಿಯಾದ ಶ್ರೀ ಅಶ್ವತ್ಥ್ ನಾರಾಯಣ್ ಎನ್ನುವವರು ನೀಡಿದ್ದರು. ದೂರನ್ನು ಬೆಂಬತ್ತಿ, ಹಲವಾರು ಪತ್ರವ್ಯವಹಾರಗಳನ್ನು ನಡೆಸಿ, ಲೋಕಾಯುಕ್ತ ಕಚೇರಿಯು ಶ್ರೀ ಅಶ್ವತ್ಥ್ ನಾರಾಯಣ್ ಎನ್ನುವವರು ಮಾಡಿದ ದೂರು / ಆಪಾದನೆಗಳಿಗೆ ಸಂಬಂಧಿಸಿದಂತೆ ಅರ್ಜಿದಾರನಿಂದ ವಿವರಣೆ ಕೋರಿ 20.12.2013 ರಂದು ಅರ್ಜಿದಾರನಿಗೆ ಕಾರಣ ಕೇಳುವ ನೋಟೀಸನ್ನು ಹೊರಡಿಸಿತು. ಅರ್ಜಿದಾರನು ದಿನಾಂಕ 20.12.2013 ರ ಕಾರಣ ಕೇಳುವ ನೋಟೀಸಿಗೆ 16.01.2014 ರಂದು ತನ್ನ ವಿವರಣೆ / ಪ್ರತ್ಯುತ್ತರವನ್ನು ಸಲ್ಲಿಸಿದನೆಂದು ತಿಳಿಸಲಾಗಿದೆ. ಅರ್ಜಿದಾರನ ವಿವರಣೆಯಿಂದ ತೃಪ್ತರಾಗದ ಎರಡನೇ ಪ್ರತಿವಾದಿಯು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 ರ 12 (3) ನೇ ಪ್ರಕರಣದ ಅಡಿಯಲ್ಲಿ ವಿಷಯದ ತನಿಖೆಯನ್ನು ನಡೆಸಿ ವರದಿಯನ್ನು ಸಿದ್ಧಪಡಿಸಲು ಮುಂದಾದರು.

4. ಉಪಲೋಕಾಯುಕ್ತರು, 12 (3) ನೇ ಪ್ರಕರಣದ ಅಡಿಯಲ್ಲಿ ಸಿದ್ಧಪಡಿಸಿದ ವರದಿಯನ್ನು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957 (ಸಂಕ್ಷಿಪ್ತವಾಗಿ, "ಸಿಸಿಎ ನಿಯಮಗಳು") ರ 14–ಎ ನಿಯಮದ ಅಡಿಯಲ್ಲಿ ವ್ಯವಹರಣೆ ಕೈಗೊಳ್ಳಲು ಸರ್ಕಾರಕ್ಕೆ ಕಳುಹಿಸಿದರು.

5. ಉಪಲೋಕಾಯುಕ್ತರ ವರದಿ ಮತ್ತು ದಿನಾಂಕ 01.04.2014 ರ ಪತ್ರದ ಅನುಸರಣೆಯಾಗಿ, ಮೊದಲನೇ ಪ್ರತಿವಾದಿಯು ಸಿಸಿಎ ನಿಯಮಗಳ 14–ಎ ನಿಯಮದ ಅಡಿಯಲ್ಲಿ ಅನುಬಂಧ–"ಎ" ಯಲ್ಲಿ ಕಾಣಿಸಿರುವ ದಿನಾಂಕ 29.05.2014 ರ ತನ್ನ ಆದೇಶದ ಮೂಲಕ ಉಪಲೋಕಾಯುಕ್ತಕ್ಕೆ ಶಿಸ್ತು ವ್ಯವಹರಣೆಗಳನ್ನು ವಹಿಸಿಕೊಟ್ಟರು. ತದನಂತರ, 05.06.2014 ರಂದು, ಉಪಲೋಕಾಯುಕ್ತರು ಬೆಂಗಳೂರಿನ ಕರ್ನಾಟಕ ಲೋಕಾಯುಕ್ತ ಕಚೇರಿಯ ಹೆಚ್ಚುವರಿ ರಿಜಿಸ್ಟ್ರಾರ್ ವಿಚಾರಣೆಗಳು–10 ಆದ ಶ್ರೀ ಎ.ಎಂ. ಬೆನ್ನೂರ್ ಎನ್ನುವವರನ್ನು ವಿಚಾರಣಾ ಅಧಿಕಾರಿಯಾಗಿ ನಾಮ ನಿರ್ದೇಶನ ಮಾಡಿದರು. ತತ್ಪರಿಣಾಮವಾಗಿ, 12.06.2014 ರಂದು ವಿಚಾರಣಾ ಅಧಿಕಾರಿಯು ಅರ್ಜಿದಾರರ ಮತ್ತು ಇತರ ಇನ್ನಿಬ್ಬರ ವಿರುದ್ಧ

ಆರೋಪಗಳ ಪಟ್ಟಿಯನ್ನು ರೂಪಿಸಿದರು. ಸಿಸಿಎ ನಿಯಮಗಳ 14–ಎ ನಿಯಮದ ಅಡಿಯಲ್ಲಿ ಉಪಲೋಕಾಯುಕ್ತರಿಗೆ ಶಿಸ್ತು ವ್ಯವಹರಣೆಗಳನ್ನು ವಹಿಸಿಕೊಟ್ಟ ಆದೇಶದಿಂದ ಮತ್ತು ಆರೋಪ ಪಟ್ಟಿಯನ್ನು ರೂಪಿಸಿದ್ದರಿಂದ ಬಾಧಿತರಾದ ಅರ್ಜಿದಾರರು ಈ ಮೇಲ್ಕಂಡ ಅರ್ಜಿಯನ್ನು ದಾಖಲಿಸಿದ್ದಾರೆ.

6. ಅರ್ಜಿದಾರರ ಪರ ನ್ಯಾಯವಾದಿ ಶ್ರೀ ಎಂ.ಎಸ್. ಭಾಗವತ್ ಅವರ ವಾದವನ್ನು, ಒಂದನೇ ಪ್ರತಿವಾದಿಗಳ ಪರ ಸರ್ಕಾರೀ ನ್ಯಾಯವಾದಿ ಶ್ರೀಮತಿ ಪ್ರತಿಮಾ ಹೊನ್ನಾಪುರ ಹಾಗೂ ಎರಡನೇ ಪ್ರತಿವಾದಿ, ಕರ್ನಾಟಕ ಲೋಕಾಯುಕ್ತ ಪರ ಶ್ರೀ ಮಲ್ಲಿಕಾರ್ಜುನ್ ಸಿ. ಬಸರೆಡ್ಡಿ ಅವರ ವಾದಗಳನ್ನು ಆಲಿಸಿದ್ದೇನೆ.

7. ಅರ್ಜಿದಾರರ ಪರ ನ್ಯಾಯವಾದಿಗಳು ಅರ್ಜಿದಾರರು ಮಂಡಳಿಯ ನೌಕರರಾಗಿದ್ದಾರೆ ಹಾಗಾಗಿ ಸಿಸಿಎ ನಿಯಮಗಳು ಅವರಿಗೆ ಅನ್ವಯವಾಗುವುದಿಲ್ಲ, ತತ್ಪರಿಣಾಮವಾಗಿ, ಸಿಸಿಎ ನಿಯಮಗಳ 14–ಎ ನಿಯಮವನ್ನು ಅನ್ವಯಿಸಿ ಉಪಲೋಕಾಯುಕ್ತರಿಗೆ ಶಿಸ್ತು ವ್ಯವಹರಣೆಗಳನ್ನು ವಹಿಸಿಕೊಟ್ಟ ದಿನಾಂಕ 29.05.2014 ರ ಆದೇಶಕ್ಕೆ ಕಾನೂನಿನ ಬಲವಿಲ್ಲದಂತಾಗಿದೆ ಎಂದು ವಾದಿಸಿದ್ದಾರೆ.

ವಾದವನ್ನು ಮುಂದುವರಿಸಿ, ಅರ್ಜಿದಾರನು ಸರ್ಕಾರೀ ನೌಕರನಲ್ಲ, ಹಾಗಾಗಿ, ಉಪಲೋಕಾಯುಕ್ತರು ಸರ್ಕಾರೀ ನೌಕರರ ವಿರುದ್ಧ ಮಾತ್ರ ವಿಚಾರಣೆ ನಡೆಸಬಹುದೇ ಹೊರತು ಅರ್ಜಿದಾರರಂತಹ ಮಂಡಳೀಯ ನೌಕರರ ವಿರುದ್ಧವಲ್ಲವೆಂದು ವಾದಿಸಿದ್ದಾರೆ. ಈ ವಾದಕ್ಕೇ ಬೆಂಬಲವಾಗಿ ಅವರು ***ಕುಲದೀಪ್ ಸಿಂಗ್ –ವಿರುದ್ಧ– ಕಮಿಷನರ್ ಆಫ್ ಪೋಲೀಸ್***[1] ಪ್ಯಾರಾ 28; ***ಡಿ. ಮನು ಮತ್ತು ಇನ್ನೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ ಸರ್ಕಾರ***[2] ಮತ್ತು 06.01.2005 ರಂದು ವಿಲೆಯಾದ ***ಕೆ.ಎಸ್.ಶ್ರೀನಿವಾಸನ್ –ವಿರುದ್ಧ– ಕರ್ನಾಟಕ ರಾಜ್ಯ ಸರ್ಕಾರ ಮತ್ತು ಇತರರು***[3] ಮೊಕದ್ದಮೆಗಳಲ್ಲಿನ ತೀರ್ಪನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಅರ್ಜಿದಾರರ ನ್ಯಾಯವಾದಿಗಳ ಒಟ್ಟಾರೆ ವಾದವೇನೆಂದರೆ, ಬಿಡಬ್ಲ್ಯೂಎಸ್ಎಸ್‌ಬಿಯು (ಮಂಡಳಿ) ಕೆಸಿಎಸ್ (ಸಿಸಿ&ಎ)

1. 1999 (2) ಎಸ್‌ಸಿಸಿ 10
2. 15.09.2008 ರಂದು ವಿಲೆಯಾದ ಡಬ್ಲ್ಯೂಪಿ. 25502/2005
3. ಡಬ್ಲ್ಯೂ.ಪಿ.ಸಂ.36932/99

ನಿಯಮಗಳು, 1957 ಅನ್ನು ಅಳವಡಿಸಿಕೊಳ್ಳದಿರುವುದರಿಂದ ಸಿಸಿಎ ನಿಯಮಗಳು ಅನ್ವಯವಾಗುವುದಿಲ್ಲ ಮತ್ತು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 ರ 12 (4) ನೇ ಪ್ರಕರಣಾದೊಂದಿಗೆ ಓದಿಕೊಂಡಂತೆ 12 (3) ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಉಪಲೋಕಾಯುಕ್ತರ ವರದಿಯನ್ನು ಮೊದಲನೇ ಪ್ರತಿವಾದಿಯು ಪರಿಶೀಲಿಸಿಲ್ಲ ಎಂಬುದಾಗಿದೆ.

8. ಮಾನ್ಯ ಸರ್ಕಾರೀ ನ್ಯಾಯವಾದಿಗಳು, ಮಂಡಳಿಯು ಸಿಸಿಎ ನಿಯಮಗಳನ್ನು ಅಳವಡಿಸಿಕೊಂಡಿವೆ ಎಂದು ವಾದಿಸುವುದಕ್ಕೇ ಅಧಿಸೂಚನೆ ಸಂ.ಎಸ್‌ಡಬ್ಲ್ಯೂಎಲ್.72. ಎಲ್‌ಬಿಡ್ಲ್ಯೂ–82 ದಿನಾಂಕ 12–10–1982 ಮತ್ತು ಅಧಿಸೂಚನೆ ಸಂಖ್ಯೆ: ಎಲ್‌ಬಿಡಬ್ಲ್ಯೂಎಸ್‌ಎಸ್‌ಬಿ/ಸಿಎಓ–ಎಸ್/112/ಇಎಸ್‌ಟಿ–1/4163/2005–06 ದಿನಾಂಕ 01.03.2006 ಎರಡು ಅಧಿಸೂಚನೆಗಳನ್ನು ಹಾಜರುಪಡಿಸಿದ್ದಾರೆ. ಅದರಂತೆ, ಮೊದಲನೇ ಪ್ರತಿವಾದಿ–ಸರ್ಕಾರವು ಸಿಸಿಎ ನಿಯಮಗಳ 14–ಎ ನಿಯಮವನ್ನು ಅನ್ವಯಿಸಿಕೊಂಡು ಉಪಲೋಕಾಯುಕ್ತಕ್ಕೆ ಶಿಸ್ತು ವ್ಯವಹರಣೆಗಳನ್ನು ವಹಿಸಿಕೊಟ್ಟಿರುವುದು ಕ್ರಮಬದ್ಧವಾಗಿದೆ ಎಂದು ವಾದಿಸಿದ್ದಾರೆ.

9. ಮಾನ್ಯ ಸರ್ಕಾರೀ ನ್ಯಾಯವಾದಿಗಳು ಮುಂದುವರಿದು ವಾದಿಸಿ, ಮಂಡಳಿಯು ಅರ್ಜಿದಾರರಂತಹ ತನ್ನ ನೌಕರರಿಗೆ ಸಿಸಿಎ ನಿಯಮಗಳನ್ನು ಅಳವಡಿಸಿದಾಗ, ಮೊದಲನೇ ಪ್ರತಿವಾದಿ–ಸರ್ಕಾರ–ನಗರಾಭಿವೃದ್ಧಿ ಇಲಾಖೆಯು ಶಿಸ್ತು ವ್ಯವಹರಣೆಗಳನ್ನು ಜರುಗಿಸಲು ಅಧಿಕಾರ ಪಡೆದಿರುವ ಮತ್ತೊಂದು ಉಪಬಂಧವಿದೆ ಎಂದರೆ, ಸಿಸಿಎ ನಿಯಮಗಳ 15(2)–ಬಿ ನಿಯಮವು ಬಿಬಿಎಂಪಿಗೆ ಪ್ರತಿನಿಯೋಜನೆಯ ಮೇಲೆ ಹೋಗಿರುವ ಮಂಡಳಿಯ ನೌಕರರ ವಿರುದ್ಧ ಶಿಸ್ತುಕ್ರಮವನ್ನು ಕೈಗೊಳ್ಳುವುದಕ್ಕೆ ಉಪಬಂಧವನ್ನು ಕಲ್ಪಿಸಿದೆ ಎಂದು ವಾದಿಸಿದ್ದಾರೆ. ಮಂಡಳಿಯಿಂದ ಬಿಬಿಎಂಪಿಗೆ ಅರ್ಜಿದಾರರು ಪ್ರತಿನಿಯೋಜನೆ ಹೋಗಿರುವ ವಿಷಯವನ್ನು ಉಲ್ಲೇಖಿಸಿ ಇದನ್ನು ಎತ್ತಿತೋರಿಸಿದ್ದಾರೆ. ಪ್ರತಿನಿಯೋಜನೆ ಮತ್ತು ಸ್ವಂತ ಇಲಾಖೆಗೆ ಮರಳಿ

ಕಳುಹಿಸುವ ಅಧಿಕಾರವು ಮೊದಲನೇ ಪ್ರತಿವಾದಿ–ಸರ್ಕಾರ–ನಗರಾಭಿವೃದ್ಧಿ ಇಲಾಖೆಯಲ್ಲಿ ನಿಹಿತವಾಗಿದೆ. ಆದ್ದರಿಂದ, ಶಿಸ್ತು ವ್ಯವಹರಣೆಗಳ ವಹಿಸುವಿಕೆ ಆದೇಶವನ್ನು ಹೊರಡಿಸಲಾಗಿದೆಯೆಂದು ಮುಂದುವರಿದು ವಾದಿಸಲಾಗಿದೆ. ಸಿಸಿಎ ನಿಯಮಗಳನ್ನು ಅಳವಡಿಸಿಕೊಂಡಿರುವುದನ್ನು ಗಮನದಲ್ಲಿಟ್ಟುಕೊಂಡಾಗ 14–ಎ ಮತ್ತು 15(2)–ಬಿ ನಿಯಮದೊಂದಿಗೆ ಓದಿಕೊಂಡಂತೆ ಅರ್ಜಿದಾರರ ಪರ ನ್ಯಾಯವಾದಿಯು ಉಲ್ಲೇಖಿಸಿದ ತೀರ್ಪು ಪ್ರಸ್ತುತ ಮೊಕದ್ದಮೆಗೆ ಸಂಬಂಧಪಡುವುದಿಲ್ಲವೆಂದೂ ಸಹ ವಾದಿಸಲಾಗಿದೆ. ಈ ವಾದಕ್ಕೆ ಬೆಂಬಲವಾಗಿ ಮಾನ್ಯ ಸರ್ಕಾರೀ ನ್ಯಾಯವಾದಿಗಳು ಸರ್ವೋಚ್ಚ ನ್ಯಾಯಾಲಯದ ***ನಾಯರ್ ಸರ್ವೀಸ್ ಸೊಸೈಟಿ –ವಿರುದ್ಧ– ಡಾ. ಟಿ. ಬೀರ್ಮಸ್ತಾನ್***[4], ಮೊಕದ್ದಮೆಯಲ್ಲಿನ ತೀರ್ಪನ್ನು ಆಧಾರವಾಗಿಟ್ಟುಕೊಂಡಿದ್ದಾರೆ, ಅದರಲ್ಲಿ ಈ ಕೆಳಕಂಡಂತೆ ಅಭಿಪ್ರಾಯಪಡಲಾಗಿದೆ:

> "48. ಎದುರುದಾರರು ನಮ್ಮ ಮುಂದೆ ಹಲವಾರು ತೀರ್ಪುಗಳನ್ನು ಉಲ್ಲೇಖಿಸಿದ್ದಾರೆ, ಆದರೆ, ಸೇವಾ ನ್ಯಾಯಶಾಸ್ತ್ರದಲ್ಲಿನ ತೀರ್ಪುಗಳನ್ನು ಆ ರಾಜ್ಯದಲ್ಲಿ ಆ ಕ್ಷೇತ್ರಕ್ಕೆ ಮೀಸಲಾತಿ ಉಪಬಂಧಗಳು ಸಶಕ್ತಗೊಳಿಸುವ ಉಪಬಂಧಗಳಾಗಿದ್ದು, ವಿವಿಧ ರಾಜ್ಯ ಸರ್ಕಾರಗಳು ವಿಭಿನ್ನ ಮೀಸಲಾತಿ ವಿಧಾನಗಳನ್ನು ಹೊಂದಿರಬಹುದು. ನಿಯಮಗಳನ್ನೇನೂ ಇಲ್ಲಿ ಪ್ರಶ್ನಿಸಿಲ್ಲ, ಪ್ರಶ್ನಿಸಿರುವುದು ಕೇವಲ ಅರ್ಜಿಯ ವಿಷಯವನ್ನು ಮಾತ್ರ. ನಮ್ಮ ಅಭಿಪ್ರಾಯದಲ್ಲಿ, ಸಮುದಾಯ ಆವರ್ತನೆಯನ್ನು 20 ಖಾಲಿ ಹುದ್ದೆಗಳನ್ನು ಒಂದು ಬ್ಲಾಕ್ ಎಂದು ತೆಗೆದುಕೊಂಡು ಅನ್ವಯಿಸಿಕೊಳ್ಳಬೇಕು."

ಹಾಗಾಗಿ, ಅರ್ಜಿದಾರರು, ಶಿಸ್ತು ವ್ಯವಹರಣೆಗಳನ್ನು ವಹಿಸಿಕೊಡುವ ಮತ್ತು ಆರೋಪ ಪಟ್ಟಿಯನ್ನು ರೂಪಿಸುವ ವಿಷಯದಲ್ಲಿ ಮಧ್ಯಪ್ರವೇಶಿಸುವ ಹಾಗೆ ಮೊಕದ್ದಮೆಯನ್ನು ಸಿದ್ಧಪಡಿಸಿಲ್ಲ.

4. (2009) 5 ಎಸ್‌ಸಿಸಿ 545

10. ಎರಡನೇ ಪ್ರತಿವಾದಿ, ಕರ್ನಾಟಕ ಲೋಕಾಯುಕ್ತ ಪರ ಮಾನ್ಯ ನ್ಯಾಯವಾದಿಗಳು ವಾದ ಮಂಡಿಸಿ, ಬಿಡಬ್ಲ್ಯೂಎಸ್ಎಸ್ಬಿ ಅಧಿನಿಯಮ, 1964 ರ 124 ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 ರ ಉಪಬಂಧಗಳ ಅನುಸಾರವಾಗಿ ದೂರುಗಳನ್ನು ತನಿಖೆ ಮಾಡಿ ಮುಂದಿನ ಕ್ರಮವನ್ನು ಕೈಗೊಳ್ಳುವ ಅಧಿಕಾರವು ಲೋಕಾಯುಕ್ತ ಕಚೇರಿಗಿದೆ ಎಂದು ವಾದಿಸಿದ್ದಾರೆ. ತದನುಸಾರವಾಗಿ ಮೊದಲನೇ ಮತ್ತು ಎರಡನೇ ಪ್ರತಿವಾದಿಗಳೂ ತೆಗೆದುಕೊಂಡ ಕ್ರಮವು ಕ್ರಮಬದ್ಧವಾಗಿದ್ದು, 12(3) ರ ವರದಿಯನ್ನು ಸಲ್ಲಿಸುವಲ್ಲಿ ಮತ್ತು ಸಿಸಿಎ ನಿಯಮಗಳ 14–ಎ ನಿಯಮದ ಮೇರೆಗೆ ಶಿಸ್ತುವ್ಯವಹರಣೆಗಳನ್ನು ವಹಿಸಲು ಕೋರಿರುವುದರಲ್ಲಿ ಮತ್ತು ಮುಂದೆ ಆರೋಪ ಪಟ್ಟಿಯನ್ನು ರೂಪಿಸಿರುವಲ್ಲಿ ಯಾವುದೇ ದುರ್ಬಲತೆಯಾಗಲಿ ಅಥವಾ ಲೋಪವಾಗಲಿ ಇಲ್ಲವೆಂಬುದು ಅವರ ವಾದವಾಗಿದೆ.

11. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿ, ಅವರು ಮಂಡಳಿಯ ನೌಕರರಾಗಿದ್ದಾರೆ, ಬಿಡಬ್ಲ್ಯೂಎಸ್ಎಸ್ಬಿ ಅಧಿನಿಯಮ, 1964 ರ ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳುವುದಕ್ಕೇ ಯಾವುದೇ ಉಪಬಂಧಗಳು ಇಲ್ಲದಿರುವುದರಿಂದ ಮಂಡಳಿಯ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಕ್ಕೇ ಮೊದಲನೇ ಪ್ರತಿವಾದಿ–ಸರ್ಕಾರಕ್ಕೆ ಯಾವುದೇ ಅಧಿಕಾರವಿಲ್ಲವೆಂದು ವಾದಿಸಿದ್ದಾರೆ. ಈ ಹಿನ್ನೆಲೆಯಲ್ಲಿ, ಬಿಡಬ್ಲ್ಯೂಎಸ್ಎಸ್ಬಿ ಅಧಿನಿಯಮ, 1964 ರ ಕೆಲವು ನಿರ್ದಿಷ್ಟ ಉಪಬಂಧಗಳನ್ನು ಪರಿಶೀಲಿಸುವುದು ಅಗತ್ಯವಿದೆ. 4ನೇ ಪ್ರಕರಣವು ಮಂಡಳಿಯ ಸದಸ್ಯರ ಪದಾವಧಿ ಮತ್ತು ಮರು–ನೇಮಕಾತಿ ಷರತ್ತುಗಳಿಗೆ ಸಂಬಂಧಪಡುತ್ತದೆ. 5ನೇ ಪ್ರಕರಣವು ಮಂಡಳಿಯ ಸದಸ್ಯರಾಗಿರುವ ಅನರ್ಹತೆಗೆ ಸಂಬಂಧಿಸುತ್ತದೆ. 12ನೇ ಪ್ರಕರಣವು ಸಿಬ್ಬಂದಿಯ ನೇಮಕಾತಿಗೆ ಸಂಬಂಧಪಡುತ್ತದೆ. 12ನೇ ಪ್ರಕರಣದ ಉದ್ಧೃತಭಾಗವನ್ನು ಇಲ್ಲಿ ಉಲ್ಲೇಖಿಸಲಾಗಿದೆ:–

"12. ಸಿಬ್ಬಂದಿಯ ನೇಮಕಾತಿ–ಮಂಡಳಿಯ ಕಾರ್ಯದರ್ಶಿ, ಮುಖ್ಯ ಅಭಿಯಂತರರು, ನೈರ್ಮಲ್ಯ ಅಭಿಯಂತರರು, ನೀರು ಸರಬರಾಜು ಅಭಿಯಂತರರು ಮತ್ತು ಅಂತಹುದೇ ಇತರ ಅಧಿಕಾರಿಗಳನ್ನು ಮತ್ತು ಈ ಅಧಿನಿಯಮದ ಅಡಿಯಲ್ಲಿ ಮಂಡಳಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವುದಕ್ಕೆ ಅಗತ್ಯವಿರಬಹುದಾದಷ್ಟು ನೌಕರರನ್ನು ನೇಮಕ ಮಾಡಿಕೊಳ್ಳಬಹುದು:

ಪರಂತು, ಕಾರ್ಯದರ್ಶಿ, ಮುಖ್ಯ ಅಭಿಯಂತರರು, ನೈರ್ಮಲ್ಯ ಅಭಿಯಂತರರು ಮತ್ತು ನೀರು ಸರಬರಾಜು ಅಭಿಯಂತರರ ನೇಮಕಾತಿಯನ್ನು ಸರ್ಕಾರದೊಂದಿಗೆ (ಸಮಾಲೋಚಿಸಿದ ನಂತರ ಮಾಡತಕ್ಕದ್ದು)."

89 ನೇ ಪ್ರಕರಣವು ರಾಜ್ಯ ಸರ್ಕಾರವು ನೀಡುವ ನಿರ್ದೇಶನಗಳಿಗೆ ಸಂಬಂಧಿಸುತ್ತದೆ. 89 ನೇ ಪ್ರಕರಣದ ಉದ್ಧೃತ ಭಾಗವನ್ನು ಇಲ್ಲಿ ಉಲ್ಲೇಖಿಸಲಾಗಿದೆ:–

"89 ರಾಜ್ಯ ಸರ್ಕಾರದ ನಿರ್ದೇಶನಗಳು.– (1) ಮಂಡಳಿಯು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಕಾರ್ಯನೀತಿಯ ಪ್ರಶ್ನೆಗಳ ಬಗ್ಗೆ ಸರ್ಕಾರವು ನೀಡಬಹುದಾದಂಥ ನಿರ್ದೇಶನಗಳನ್ನು ಅನುಸರಿಸತಕ್ಕದ್ದು;

(ಪರಂತು, ಅಂಥ ನಿರ್ದೇಶನವನ್ನು ಮಂಡಳಿಯೊಂದಿಗೆ ಸಮಾಲೋಚಿಸಿದ ನಂತರ ನೀಡತಕ್ಕದ್ದು.)

(2) ಕಾರ್ಯನೀತಿಯ ಪ್ರಶ್ನೆ ಯಾವುದು ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿರುವ ಸಂದರ್ಭದಲ್ಲಿ ಆ ಬಗ್ಗೆ ರಾಜ್ಯ ಸರ್ಕಾರದ ನಿರ್ಣಯವೇ ಅಂತಿಮವಾಗಿರತಕ್ಕದ್ದು."

ಮುಂದೆ, 124 ನೇ ಪ್ರಕರಣವು ಈ ಕೆಳಕಂಡಂತಿದೆ:–

124. ಮಂಡಳಿಯ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ಲೋಕ ನೌಕರರಾಗಿರುವುದು:– (1) ಮಂಡಳಿಯ ಎಲ್ಲಾ ಸದಸ್ಯರು, ಅಧಿಕಾರಿಗಳು ಮತ್ತು ನೌಕರರನ್ನು, ಈ ಅಧಿನಿಯಮದ ಉಪಬಂಧಗಳನುಸಾರ ಅಥವಾ ಅದರಡಿಯಲ್ಲಿ ರಚಿಸಿದ ಯಾವುದೇ ನಿಯಮ ಅಥವಾ ವಿನಿಮಯದ ಅನುಸಾರ ಕಾರ್ಯನಿರ್ವಹಿಸುವಾಗ ಅಥವಾ ಕಾರ್ಯನಿರ್ವಹಿಸಿದನೆಂದು ತಾತ್ಪರ್ಯವಾಗುವಾಗ, ಭಾರತೀಯ ದಂಡ ಸಂಹಿತೆಯ (ಕೇಂದ್ರ ಅಧಿನಿಯಮ 1860 ರ 45) 21 ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಭ್ರಷ್ಠಾಚಾರ ಪ್ರತಿಬಂಧ ಅಧಿನಿಯಮ 1947 (ಕೇಂದ್ರ ಅಧಿನಿಯಮ 1947ರ 2)ರ ಅಧಿವ್ಯಾಪ್ತಿಯಲ್ಲಿ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 1947 (ಕೇಂದ್ರ ಅಧಿನಿಯಮ 1947ರ 2)ರ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸತಕ್ಕದ್ದು.

(2) ಉಪ–ಪ್ರಕರಣದ (1) ಉದ್ದೇಶಗಳಿಗಾಗಿ ಭಾರತ ದಂಡ ಸಂಹಿತೆಯ 161 ನೇ ಪ್ರಕರಣದಲ್ಲಿ ''ರಾಜ್ಯ ಸರ್ಕಾರ'' ಮತ್ತು ''ಸರ್ಕಾರ'' ಎಂಬ ಪದಗಳಲ್ಲಿ ಮಂಡಳಿಯೂ ಒಳಗೊಂಡಿದೆಯೆಂದು ಭಾವಿಸತಕ್ಕದ್ದು.

ಮೇಲೆ ತಿಳಿಸಿದ ಉಪಬಂಧಗಳ ಹಿನ್ನೆಲೆಯಲ್ಲಿ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸುತ್ತಾ, ಮಂಡಳಿಯು ಅರ್ಜಿದಾರರನ್ನು ಪ್ರಸಕ್ತ ವೃಂದಕ್ಕೆ ಬಡ್ತಿ ನೀಡಿರುವುದರಿಂದ ಮಂಡಳಿಯು ನೇಮಕಾತಿ ಪ್ರಾಧಿಕಾರ ಮತ್ತು ಶಿಸ್ತು ಪ್ರಾಧಿಕಾರವಾಗಿದೆಯೆಂದು ವಾದಿಸಿದ್ದಾರೆ. ರಾಜ್ಯ ಸರ್ಕಾರವು ಅರ್ಜಿದಾರರಂತಹ ಮಂಡಳಿ ನೌಕರರ ವಿರುದ್ಧ ಶಿಸ್ತು ವ್ಯವಹರಣೆಗಳನ್ನು ಕೈಗೊಳ್ಳುವುದಕ್ಕೆ ತಾನು ಶಿಸ್ತು ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರವೆಂದು ಗುರುತಿಸಿಕೊಂಡಿಲ್ಲ. ಆದ್ದರಿಂದ, ಉಪಲೋಕಾಯುಕ್ತರಿಗೆ ಶಿಸ್ತು ವ್ಯವಹರಣೆಗಳನ್ನು ವಹಿಸಿಕೊಡುವುಲ್ಲಿ ಮೊದಲನೇ ಪ್ರತಿವಾದಿ – ಸರ್ಕಾರ – ನಗರಾಭಿವೃದ್ಧಿ ಇಲಾಖೆಗೆ ಯಾವ ಕಾನೂನಿನ

ಅಧಿಕಾರ ಬಲವೂ ಇಲ್ಲ, ತತ್ಪರಿಣಾಮವಾಗಿ, ತನಿಖಾಧಿಕಾರಿಯ ಆರೋಪ ಪಟ್ಟಿಯನ್ನು ರೂಪಿಸಿರುವುದು ಕಾನೂನುಬಾಹಿರವಾಗಿದೆ.

12. ಕರ್ನಾಟಕ ಲೋಕಾಯುಕ್ತ ಅಧಿನಿಯಮದ 12(3) ಮತ್ತು (4) ನೇ ಪ್ರಕರಣವನ್ನು ಉಲ್ಲೇಖಿಸುವುದು ಸೂಕ್ತವೆನಿಸುತ್ತಿದ್ದು, ಅದು ಈ ಕೆಳಕಂಡಂತಿದೆ:–

> "12(3). ಆಪಾದನೆಯನ್ನು ಒಳಗೊಂಡ (xxxx) ಯಾವುದೇ ಕಾರ್ಯದ ಬಗ್ಗೆ ತನಿಖೆಯನ್ನು ಮಾಡಿದ ನಂತರ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತರಿಗೆ ಅಂಥ ಆಪಾದನೆಯು ಸಂಪೂರ್ಣವಾಗಿ ಅಥವಾ ಭಾಗಶಃ ರುಜುವಾತಾಗಿದೆಯೆಂದು ಮನವರಿಕೆಯಾದರೆ, ಅವರು ತನ್ನ ನಿರ್ಣಯಗಳು ಮತ್ತು ಶಿಫಾರಸ್ಸುಗಳನ್ನು ಸಂಬಂಧಪಟ್ಟ ದಸ್ತಾವೇಜುಗಳು, ಸಾಕ್ಷ್ಯ ವಸ್ತು ವಿಷಯಗಳು ಮತ್ತು ಇತರ ಸಾಕ್ಷ್ಯದ ಸಹಿತ ಸಕ್ಷಮ ಪ್ರಾಧಿಕಾರಿಗೆ ಲಿಖಿತ ವರದಿಯ ಮೂಲಕ ತಿಳಿಸತಕ್ಕದ್ದು.
>
> (4) ಸಕ್ಷಮ ಪ್ರಾಧಿಕಾರವು, (3) ನೇ ಉಪ–ಪ್ರಕರಣದ ಮೇರೆಗೆ ತನಗೆ ಕಳುಹಿಸಲ್ಪಟ್ಟ ವರದಿಯನ್ನು ಪರಿಶಿಲಿಸತಕ್ಕದ್ದು ಮತ್ತು ಆ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳುಗಳೊಳಗೆ ಆ ವರದಿಯ ಆಧಾರದ ಮೇಲೆ ತೆಗೆದುಕೊಂಡ ಅಥವಾ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮದ ಬಗ್ಗೆ ಲೋಕಾಯುಕ್ತರಿಗೆ ಅಥವಾ ಉಪಲೋಕಾಯುಕ್ತರಿಗೆ ತಿಳಿಸತಕ್ಕದ್ದು ಅಥವಾ ತಿಳಿಸುವಂತೆ ಮಾಡತಕ್ಕದ್ದು."

13. ಕರ್ನಾಟಕ ಲೋಕಾಯುಕ್ತ ಅಧಿನಿಯಮದ 12(4) ನೇ ಪ್ರಕರಣವು, ಕರ್ನಾಟಕ ಲೋಕಾಯುಕ್ತ ಅಧಿನಿಯಮದ 12(3) ನೇ ಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿದ ವರದಿಯನ್ನು ಸಕ್ಷಮ ಪ್ರಾಧಿಕಾರವು

ಪರಿಶೀಲಿಸತಕ್ಕದ್ದೆಂದು ಆಜ್ಞಾಪಿಸುತ್ತದೆ. ಉಪಲೋಕಾಯುಕ್ತಕ್ಕೆ ಶಿಸ್ತು ವ್ಯವಹರಣೆಗಳನ್ನು ವಹಿಸಿಕೊಡುವಾಗ ಮೊದಲನೇ ಪ್ರತಿವಾದಿಯು 12(3) ನೇ ಪ್ರಕರಣದ ವರದಿ ಪರಿಶೀಲನೆಯ ಅಂಶವನ್ನು ಪಾಲಿಸಿಲ್ಲ. ಆದೇಶದಲ್ಲಿ ವರದಿ ಮತ್ತು ದಸ್ತಾವೇಜುಗಳನ್ನು ಪರಿಶೀಲಿಸಲಾಗಿದೆಯೆಂದೇ ಹೇಳಲಾಗಿದೆ. ನಿರ್ಣಯವು ಕೇವಲ ನಿರ್ಣಾಯಕವಾದದ್ದಾಗಿದೆ. ಮೊದಲನೇ ಪ್ರತಿವಾದಿ–ಸರ್ಕಾರವು ವರದಿ ಪರಿಶೀಲನೆ ಮಾಡಿರುವುದನ್ನು ತೋರಿಸುವುದಕ್ಕೆ ಯಾವುದೇ ಸಾಕ್ಷ್ಯಗಳಿಲ್ಲ. ಕರ್ನಾಟಕ ಲೋಕಾಯುಕ್ತ ಅಧಿನಿಯಮದ 12(4) ನೇ ಪ್ರಕರಣವು ಆಜ್ಞಾಪಿಸಿರುವಾಗ, ಎಂದರೆ, "ಪರಿಶೀಲಿಸತಕ್ಕದ್ದು" ಎಂದು ಸಮಾದೇಶಿಸಿರುವಾಗ, ಆ ವರದಿಯನ್ನು ಹೇಗೆ ಪರಿಶೀಲಿಸಲಾಯಿತು ಎಂಬುದನ್ನು ಬಹಿರಂಗಪಡಿಸುವುದು ಮೊದಲನೇ ಪ್ರತಿವಾದಿಯ ಮೇಲೆ ಹೊರಿಸಿದ ಕರ್ತವ್ಯವಾಗಿದೆ. ಪ್ರಶ್ನಿತ ಸರ್ಕಾರದ ಆದೇಶವನ್ನು ಓದಿದ್ದರಿಂದ ವರದಿಯನ್ನು ಪರಿಶೀಲಿಸಿಲ್ಲ ಎಂಬುದು ಸ್ಫಟಿಕದಷ್ಟೇ ಸ್ಪಷ್ಟವಾಗಿದೆ. ಹಾಗಾಗಿ ಇದೊಂದು ಮಧ್ಯಸ್ಥಿಕೆ ನಿರ್ಣಯವಾಗಿದೆ.

14. ಮಾನ್ಯ ಸರ್ಕಾರೀ ವಕೀಲರು ಹಾಜರುಪಡಿಸಿದ ದಿನಾಂಕ 01.03.2006 ರ ಅಧಿಸೂಚನೆಯೊಂದಿಗೆ ಓದಿಕೊಂಡಂತೆ ದಿನಾಂಕ 12.10.1982 ರ ಅಧಿಸೂಚನೆಯ ಹಿನ್ನೆಲೆಯಲ್ಲಿ, ಸಿಸಿಎ ನಿಯಮಗಳೂ ಅನ್ವಯವಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಸಿಸಿಎ ನಿಯಮಗಳನ್ನು ಅಳವಡಿಸಿಕೊಂಡಿಲ್ಲದಿರುವುದರಿಂದ ಅವು ಅನ್ವಯವಾಗುವುದಿಲ್ಲವೆಂಬ ಅರ್ಜಿದಾರರ ವಾದವು ಸಮರ್ಥನೀಯವಾಗಿಲ್ಲ. ಮೊದಲನೇ ಪ್ರತಿವಾದಿ–ಸರ್ಕಾರ ಮತ್ತು ಬಿಬಿಎಂಪಿಯು ಅರ್ಜಿದಾರರಂತಹ ಮಂಡಳಿಯ ನೌಕರರ ವಿರುದ್ಧ ಶಿಸ್ತು ವ್ಯವಹರಣೆಗಳನ್ನು ಕೈಗೊಳ್ಳುವುದಕ್ಕೆ, ನಿರ್ಣಯ ತೆಗೆದುಕೊಂಡ ಸಂದರ್ಭಗಳಲ್ಲಿ ಮಾತ್ರ ಮೊದಲನೇ ಪ್ರತಿವಾದಿ – ಸರ್ಕಾರವು ಸಿಸಿಎ ನಿಯಮಗಳ 15(2)–ಬಿ ನಿಯಮವನ್ನು ಅನ್ವಯಿಸಿಕೊಳ್ಳ ಬಹುದಾಗಿದೆ. ಪ್ರಸ್ತುತ ಮೊಕದ್ದಮೆಯಲ್ಲಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 ರ ಅಡಿಯಲ್ಲಿ ಕ್ರಮವನ್ನು ಕೈಗೊಳ್ಳಲಾಗಿದೆ. ತತ್ಪರಿಣಾಮವಾಗಿ, ಸಿಸಿಎ ನಿಯಮಗಳ 15(2)–ಬಿ ನಿಯಮವು ಅನ್ವಯವಾಗುವುದಿಲ್ಲ.

15. ಕರ್ನಾಟಕ ಲೋಕಾಯುಕ್ತ ಅಧಿನಿಯಮದ 12(3) ನೇ ಪ್ರಕರಣದ ಮೇರೆಗೆ ವರದಿಯನ್ನು ಕಳುಹಿಸುವಾಗ ಉಪಲೋಕಾಯುಕ್ತರು ಸಿಸಿಏ ನಿಯಮಗಳ 14–ಎ ನಿಯಮದ ಮೇರೆಗೆ ಶಿಸ್ತು ವ್ಯವಹರಣೆಗಳನ್ನು ವಹಿಸುವಂತೆ ಕೋರಿದ್ದರು. ಲೋಕಾಯುಕ್ತ ಅಧಿನಿಯಮದ 12(4) ನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಗೆ ವಹಿಸಿಕೊಡುವಂತೆ ಕೋರುವುದು ಅರ್ಜಿದಾರರಂತಹ ಮಂಡಳಿ ನೌಕರರ ಸಂಬಂಧದಲ್ಲಿ ಸರ್ಕಾರದ ಪಾತ್ರವೇನು ಎಂಬುದನ್ನು ಪರಿಶೀಲಿಸದೆ ಮಾಡಿದ ಕೋರಿಕೆಯಾಗಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಮಂಡಳಿಯು ಎಲ್ಲಾ ಉದ್ದೇಶಗಳಿಗಾಗಿ ನೇಮಕಾತಿ ಪ್ರಾಧಿಕಾರವಾಗಿದೆ ಮತ್ತು ಸರ್ಕಾರದ ಕಾರ್ಯವು ತಾನು ನೀಡಬಹುದಾದಂಥ ಕಾರ್ಯನೀತಿ ಪ್ರಶ್ನೆಗಳ ಬಗ್ಗೆ ಮಂಡಳಿಗೆ ಅಗತ್ಯ ನಿರ್ದೇಶನಗಳನ್ನು ನೀಡುವುದು ಮಾತ್ರವೇ ಆಗಿದೆ ಹಾಗೂ ಕಾರ್ಯ ನೀತಿ ಪ್ರಶ್ನೆ ಯಾವುದು ಎಂಬ ಬಗ್ಗೆ ಭಿನ್ನಾಭಿಪ್ರಾಯವಿದ್ದ ಸಂದರ್ಭದಲ್ಲಿ ರಾಜ್ಯ ಸರ್ಕಾರದ ನಿರ್ಣಯವೇ ಅಂತಿಮವಾಗಿರುತ್ತದೆ, ಇತ್ಯಾದಿ ಅಂಶಗಳಿರುವ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ, 1964 ಕ್ಕೇ ಸಂಬಂದಿಸಿದಂತೆ ಅದರಲ್ಲೂ ನಿರ್ಧಿಷ್ಟವಾಗಿ 89 ಮತ್ತು 124 ನೇ ಪ್ರಕರಣದೊಂದಿಗೆ ಓದಿಕೊಂಡ 12 ನೇ ಪ್ರಕರಣದಕ್ಕೆ ಸಂಬಂದಿಸಿದಂತೆ ಸರ್ಕಾರ–ಮೊದಲನೇ ಪ್ರತಿವಾದಿಯು ಶಿಸ್ತು ಪ್ರಾಧಿಕಾರವೇ ಅಥವಾ ಅಲ್ಲವೇ ಎಂಬುದನ್ನು ನೋಡಬೇಕಾಗುತ್ತದೆ. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ, ಮಂಡಳಿಯ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ನೀಡುವ ಯಾವುದೇ ಒಂದು ನಿರ್ಧಿಷ್ಟ ಉಪಬಂಧವು ಬಿಡಬ್ಲ್ಯೂಎಸ್ಎಸ್‌ಬಿ ಅಧಿನಿಯಮ, 1964 ರಲ್ಲಿ ಇಲ್ಲ. ಹಾಗಾಗಿ, ಶಿಸ್ತು ವ್ಯವಹರಣೆಗಳನ್ನು ವಹಿಸಿಕೊಡುವಂತೆ ಸರ್ಕಾರವನ್ನು ಕೋರಿರುವ 2ನೇ ಪ್ರತಿವಾದಿಯು ಸೂಕ್ತ ಗಮನ ವಹಿಸಿರುವುದಿಲ್ಲ, ತತ್ಪರಿಣಾಮವಾಗಿ, ಸಿಸಿಏ ನಿಯಮಗಳ 14–ಎ ನಿಯಮದ ಅಡಿಯಲ್ಲಿ ಉಪಲೋಕಾಯುಕ್ತರಿಗೆ ಶಿಸ್ತು ವ್ಯವಹರಣೆಗಳನ್ನು ವಹಿಸಿಕೊಡುವ ಮೊದಲನೇ ಪ್ರತಿವಾದಿ–ಸರ್ಕಾರದ ದಿನಾಂಕ 29.05.2014 ರ ಪ್ರಶ್ನಿತ ಆದೇಶಕ್ಕೆ ಮತ್ತು ಸಿಸಿಏ ನಿಯಮಗಳ 11ನೇ ನಿಯಮದ ಅಡಿಯಲ್ಲಿ ದಿನಾಂಕ 12.06.2014 ರ ಆರೋಪ ಪಟ್ಟಿಯನ್ನು ರೂಪಿಸುವ ಮುಂದಿನ ಕಾರ್ಯಕ್ಕೆ ಯಾವ ಕಾನೂನಿನ ಅಧಿಕಾರವೂ ಇಲ್ಲ.

16. ಸಿಸಿಎ ನಿಯಮಗಳ 14–ಎ ನಿಯಮವು ಸರ್ಕಾರಕ್ಕೆ ಅಧಿಕಾರಗಳನ್ನು ನೀಡುತ್ತದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಆದರೆ, ಬಿಡಬ್ಲ್ಯೂಎಸ್ಎಸ್‌ಬಿ ಅಧಿನಿಯಮ, 1964 ಸಿಸಿಎ ನಿಯಮಗಳನ್ನು ಮೇಲುಗೈಯಾಗಿಸಲಾರದು. ಈ ವಿಶಿಷ್ಟ ಪರಿಸ್ಥಿತಿಯಲ್ಲಿ, ಬಿಡಬ್ಲ್ಯೂಎಸ್ಎಸ್‌ಬಿ ಅಧಿನಿಯಮದ ಅಡಿಯಲ್ಲಿ ಸರ್ಕಾರದ ಪಾತ್ರವು ಪರಿಮಿತವಾದದ್ದು ಮತ್ತು ಮಂಡಳಿಯ ನೌಕರರ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಅದಕ್ಕೆ ಯಾವುದೇ ಅಧಿಕಾರವಿಲ್ಲ ಎಂಬುದನ್ನು ಗಮನಿಸುವುದು ಸೂಕ್ತ. ಅದೇ ಸಮಯದಲ್ಲಿ, ಐಪಿಸಿ 21 ನೇ ಪ್ರಕರಣದ ಮೇರೆಗೆ ಮತ್ತು ಭ್ರಷ್ಟಾಚಾರ ನಿಯಂತ್ರಣ ಅಧಿನಿಯಮದ ಮೇರೆಗೆ ಕ್ರಮ ಕೈಗೊಳ್ಳುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಮೇಲೆ ಹೇಳಿದ ಅಧಿನಿಯಮಕ್ಕೆ ಸಂಬಂಧಿಸಿದಂತೆ "ರಾಜ್ಯ ಸರ್ಕಾರ" ಮತ್ತು "ಸರ್ಕಾರ" ಎಂಬ ಪದಗಳು ಬಿಡಬ್ಲ್ಯೂಎಸ್ಎಸ್‌ಬಿ ಅಧಿನಿಯಮದ 124 ನೇ ಪ್ರಕರಣದ (1) ನೇ ಉಪ–ಪ್ರಕರಣದ ಉದ್ದೇಶಕ್ಕಾಗಿ "ಮಂಡಳಿ" ಎಂಬ ಪದವನ್ನು ಒಳಗೊಂಡಿದೆಯೆಂದು ಭಾವಿಸಬೇಕೆಂದು ಅದು ನಿರ್ದಿಷ್ಟವಾಗಿ ಉಪಬಂಧಿಸಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಆದ್ದರಿಂದ, ಸರ್ಕಾರವು ಪ್ರಶ್ನಿತ ಆದೇಶವನ್ನು ಹೊರಡಿಸಿರುವುದು ಮತ್ತು ತನಿಖಾ ಪ್ರಾಧಿಕಾರಿಯು ಆರೋಪ ಪಟ್ಟಿಯನ್ನು ರೂಪಿಸಿರುವುದಕ್ಕೆ ಯಾವುದೇ ಕಾನೂನಿನ ಅಧಿಕಾರಬಲವೂ ಇಲ್ಲ.

17. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಉಲ್ಲೇಖಿಸಿದ ತೀರ್ಪುಗಳಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ಅಧಿನಿಯಮದಂತಹ ಕೆಲವು ಉಪಬಂಧಗಳು ವಿವಾದಿತವಾಗಿಲ್ಲದ ಕಾರಣ ಅವುಗಳು ಪ್ರಸ್ತುತ ಮೊಕದ್ದಮೆಗೆ ಸಂಬಂಧಿಸಿರುವುದಿಲ್ಲ.

18. ಸರ್ವೋಚ್ಚ ನ್ಯಾಯಾಲಯವು ಹಲವಾರು ತೀರ್ಪುಗಳಲ್ಲಿ ಶಾಸನಾತ್ಮಕ ಉಪಬಂಧವನ್ನು ಚಲಾಯಿಸುವುದಕ್ಕಾಗಿ ಉಪಬಂಧಿಸಲಾದ ಕಾನೂನುಗಳ ನಾಲ್ಕು ಮಗ್ಗಲುಗಳಿಂದಲೂ ಅಧಿಕಾರವನ್ನು ಚಲಾಯಿಸಬಹುದೆಂದು ಅಭಿಪ್ರಾಯಪಟ್ಟಿದೆ. ಪ್ರಸ್ತುತ ಮೊಕದ್ದಮೆಯಲ್ಲಿ, ಬಿಡಬ್ಲ್ಯೂಎಸ್ಎಸ್‌ಬಿ ಅಧಿನಿಯಮ, 1964 ರಲ್ಲಿ ನಿರ್ದಿಷ್ಟ ಉಪಬಂಧವಿಲ್ಲದಿದ್ದರೂ ಉಪಲೋಕಾಯುಕ್ತರಿಗೆ ಶಿಸ್ತು ವ್ಯವಹಾರಗಳನ್ನು

ವಹಿಸಿಕೊಡುವಲ್ಲಿ ರಾಜ್ಯ ಸರ್ಕಾರವು ತನ್ನ ಅಧಿಕಾರವನ್ನು ಮೀರಿದೆ. ಆದ್ದರಿಂದ, 1 ಮತ್ತು 2 ನೇ ಪ್ರತಿವಾದಿಗಳು ಹೊರಡಿಸಿರುವ ದಿನಾಂಕ 29.05.2014 ರ ಪ್ರಶ್ನಿತ ಆದೇಶ ಮತ್ತು ದಿನಾಂಕ 12.06.2014 ರ ಆರೋಪ ಪಟ್ಟಿಯು ಯಾವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ.

19. ***ಚೇರ್ಮನ್–ಕಂ– ಮ್ಯಾನೇಜಿಂಗ್ ಡೈರೆಕ್ಟರ್, ಕೋಲ್ ಇಂಡಿಯಾ ಲಿಮಿಟೆಡ್ ಮತ್ತು ಇತರರು***[5], ಮೊಕದ್ದಮೆಯಲ್ಲಿನ ತೀರ್ಪಿನ 32 ಮತ್ತು 33 ನೇ ಪ್ಯಾರಾಗ್ರಾಫ್‌ಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಕೆಳಕಂಡಂತೆ ಅಭಿಪ್ರಾಯಪಟ್ಟಿದೆ:–

> "32. ಪ್ರಾರಂಭಿಕ ಕ್ರಮವು ಕಾನೂನಿಗೆ ತದನಂತರದ ವ್ಯವಹರಣೆಗಳೂ ಅದನ್ನು ಪುಷ್ಟೀಕರಿಸುವುದಿಲ್ಲ. ಅಂಥ ಒಂದು ನೈಜ ಪರಿಸ್ಥಿತಿಯಲ್ಲಿ ದಿ ಲೀಗಲ್ ಮ್ಯಾಕ್ಸಿಮ್ ಸುಬ್ಲಾಟೋ ಫಂಡಮೆಂಟೋ ಕ್ರೆಡಿಟ್ ಓಪಸ್ ನಿಯಮವು ಅನ್ವಯವಾಗುತ್ತದೆ, ಅರ್ಥಾತ್, ಬುನಾದಿಯನ್ನು ಕಳಚಿದ ಸಂದರ್ಭದಲ್ಲಿ ಮೇಲು ರಚನೆಯು ತಂತಾನೇ ಬಿದ್ದುಹೋಗುತ್ತದೆ ಎಂಬುದಾಗಿದೆ."

> "33. ಬದ್ರಿನಾಥ್ –ವಿರುದ್ಧ– ತಮಿಳುನಾಡು ರಾಜ್ಯ ಸರ್ಕಾರ ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು, ವ್ಯವಹರಣೆಗಳ ಮೂಲಾಧಾರ ಇಲ್ಲವಾದ ಕೂಡಲೇ ತತ್ಪರಿಣಾಮದ ಎಲ್ಲಾ ಕಾರ್ಯಗಳು, ಕ್ರಮಗಳೂ, ಆದೇಶಗಳು ತಂತಾನೇ ನೆಲ ಕಚ್ಚುತ್ತವೆ ಮತ್ತು ನ್ಯಾಯಿಕ ಹಾಗೂ ಅರೆ–ನ್ಯಾಯಿಕ ವ್ಯವಹರಣೆಗಳಿಗೆ ಅನ್ವಯವಾಗಬಹುದಾದ ತತ್ಪರಿಣಾಮ ಆದೇಶದ ಈ ಮೂಲತತ್ವವು ಆಡಳಿತಾತ್ಮಕ ಆದೇಶಗಳಿಗೂ ಅಷ್ಟೇ ಸರಿಸಮನಾಗಿ ಅನ್ವಯ ವಾಗುತ್ತದೆ. (ಕೇರಳ ರಾಜ್ಯ –ವಿರುದ್ಧ– ಪುಥೇನ್‌ಕಾವು

5. (2011) 5 ಸುಪ್ರೀಂ ಕೋರ್ಟ್ ಮೊಕದ್ದಮೆಗಳು 142

ಎನ್.ಎಸ್.ಎಸ್ ಕಾರಂಯೋಗವ್ ಮತ್ತು ಕಲಾಭಾರತಿ ಅಡ್ವೆರ್ಟೈಸಿಂಗ್ –ವಿರುದ್ಧ– ಹೇಮಂತ್ ವಿಮಲನಾಥ್ ನಾರಿಚಾನಿಯಾ ಮೊಕದ್ದಮೆಗಳನ್ನು ಸಹ ಅವಲೋಕಿಸಿ)."

ಅಲ್ಲದೆ, ಸರ್ವೋಚ್ಚ ನ್ಯಾಯಾಲಯವು, (2004) 6 ಎಸ್‌ಸಿಸಿ 440; 2011 (5) ಎಸ್‌ಸಿಸಿ 435; (2012) 5 ಎಸ್‌ಸಿಸಿ 242 ಮತ್ತು ಎಐಆರ್ 2014 ಎಸ್‌ಸಿ 88 ಮೊಕದ್ದಮೆಗಳಲ್ಲಿ ಈ ಕೆಳಕಂಡಂತೆ ಅಭಿಪ್ರಾಯಪಟ್ಟಿದೆ:–

***ಕ್ಯಾಪ್ಟನ್ ಸುಬೇ ಸಿಂಗ್ –ವಿರುದ್ಧ– ಲೆಫ್ಟಿನೆಂಟ್ ಗವರ್ನರ್ ಆಫ್ ದೆಹಲಿ***[6]:

"29. ಅಂಜುಮ್ ಎಂ.ಹೆಚ್. ಘಾಸ್ವಾಲಾ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಸಂವಿಧಾನ ಪೀಠವು, ಒಂದು ಶಾಸನವು ಒಂದು ಪ್ರಾಧಿಕಾರದಲ್ಲಿ ಒಂದು ನಿರ್ಧಿಷ್ಟ ರೀತಿಯಲ್ಲಿ ಚಲಾಯಿಸಬೇಕೆಂದು ನಿರ್ಧಿಷ್ಟ ಅಧಿಕಾರವನ್ನು ನಿಹಿತಗೊಳಿಸಿದಾಗ, ಸದರಿ ಪ್ರಾಧಿಕಾರವು ಆ ಶಾಸನದಲ್ಲಿ ಉಪಬಂಧಿಸಿದ ರೀತಿಯಲ್ಲಿ ಮಾತ್ರವೇ ಅದನ್ನು ಚಲಾಯಿಸಬೇಕು (ಈ ಸಂಬಂಧ ಧನರಾಜ್ ರೆಡ್ಡಿ –ವಿರುದ್ಧ– ಕರ್ನಾಟಕ ರಾಜ್ಯ ಮೊಕದ್ದಮೆಯನ್ನು ಕೂಡ ಅವಲೋಕಿಸಿ) ಎಂಬ ಸಾಮಾನ್ಯ ನಿಯಮವನ್ನು ಮತ್ತೊಮ್ಮೆ ಎತ್ತಿಹಿಡಿದಿದೆ. ಪ್ರಶ್ನಿತ ಶಾಸನವು ಅನುಮತಿ ನೀಡಲು ವಿಧಿಸಿದ ಷರತ್ತುಗಳನ್ನು ವ್ಯತ್ಯಾಸಗೊಳಿಸುವ ಸಂಬಂಧ ನಿಯಮಾನುಸಾರ ಕಾರ್ಯನಿರ್ವಹಿಸುವಂತೆ ಪ್ರಾಧಿಕಾರವನ್ನು ಅಗತ್ಯಪಡಿಸುತ್ತದೆ. ನಮ್ಮ ಅಭಿಪ್ರಾಯದಲ್ಲಿ, 67 (1) (ಡಿ) ಪ್ರಕರಣದ ಅಡಿಯಲ್ಲಿ, ಅದರ (i) ನೇ ಉಪ–ಖಂಡದೊಂದಿಗೆ ಓದಿಕೊಂಡಂತೆ ಅಧಿಸೂಚನೆಯನ್ನು ಹೊರಡಿಸುವ ಮೂಲಕ ಈ ಷರತ್ತುಗಳನ್ನು ವ್ಯತ್ಯಾಸಗೊಳಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅನುಮತಿಯಿಲ್ಲ."

6. (2004) 6 ಎಸ್‌ಸಿಸಿ 440

***ಜಾಯಿಂಟ್ ಆಕ್ಷನ್ ಕಮಿಟಿ ಆಫ್ ಏರ್‌ಲೈನ್ ಪೈಲಟ್ಸ್ ಅಸೋಸಿಯೇಷನ್ ಆಫ್ ಇಂಡಿಯಾ –ವಿರುದ್ಧ– ಡಿ ಜಿ ಆಫ್ ಸಿವಿಲ್ ಏವಿಯೇಷನ್*** [7];

> "27. ಇದೇ ಅಭಿಪ್ರಾಯವನ್ನೇ ಈ ನ್ಯಾಯಾಲಯವು, ಕಮಿಷನರ್ ಆಫ್ ಪೊಲೀಸ್ –ವಿರುದ್ಧ– ಗೋರ್ಧಂಡಾಸ್ ಭಾಂಜಿ, ಬಹದ್ದೂರ್‌ಸಿನ್ಹ್ ಲಖೂಬಾಯ್ ಗೋಹಿಲ್ –ವಿರುದ್ಧ– ಜಗದೀಶ್ ಬಾಯ್ ಎಂ. ಕಮಲಿಯಾ ಮತ್ತು ಪಂಚಮ್ ಚಂದ್ –ವಿರುದ್ಧ– ಹಿಮಾಚಲ ಪ್ರದೇಶ್ ರಾಜ್ಯ ಮೊಕದ್ದಮೆಗಳಲ್ಲಿ ಪುನರುಚ್ಚರಿಸಿದ್ದು, ಶಾಸನದಡಿಯಲ್ಲಿ ಸ್ವತಃ ಕಾರ್ಯನಿರ್ವಹಿಸಲು ಅಧಿಕಾರ ನಿಹಿತಗೊಂಡ ಒಂದು ಪ್ರಾಧಿಕಾರವು ಅದರಲ್ಲಿ ತಿಳಿಸಿದ ಕಾರ್ಯವಿಧಾನಗಳನ್ನು ಅನುಸರಿಸಿ ತನ್ನ ವಿವೇಚನಾಧಿಕಾರವನ್ನು ಚಲಾಯಿಸಬೇಕು ಮತ್ತು ಯಾವ ಪ್ರಾಧಿಕರಕ್ಕೆ ಶಾಸನವು ಯಾವುದೇ ಅಧಿಕಾರವ್ಯಾಪ್ತಿಯನ್ನು ಪ್ರದತ್ತಗೊಳಿಸಿಲ್ಲವೋ ಆ ಯಾವುದೇ ಪ್ರಾಧಿಕಾರದಿಂದ ನಡೆಯುವ ಹಸ್ತಕ್ಷೇಪವು ಸಂಪೂರ್ಣವಾಗಿ ಕಾನೂನಿನ ಅಧಿಕಾರ ಬಲವಿಲ್ಲದ್ದಾಗುತ್ತದೆ. ಅದು ಸಾಂವಿಧಾನಿಕ ವ್ಯವಸ್ಥೆಯನ್ನು ಉಲ್ಲಂಘಿಸುತ್ತದೆ.
>
> 28. ಮೇಲ್ಕಂಡ ಹಿನ್ನೆಲೆಯಲ್ಲಿ, ಯಾವ ಪ್ರಾಧಿಕಾರಕ್ಕೆ ಸ್ವತಃ ತನ್ನ ಅಧಿಕಾರವನ್ನು ಚಲಾಯಿಸಲು ಅಧಿಕಾರ ನಿಹಿತವಾಗಿದೆಯೋ ಆ ಪ್ರಾಧಿಕಾರವು ಆದೇಶವನ್ನು ಹೊರಡಿಸಬಹುದು ಎಂಬುದಕ್ಕೆ ಕಾನೂನು ಸಮರ್ಥನೆಯು ಕಂಡುಬರುತ್ತದೆ. ಶಾಸನದ ಅಧೀನಕ್ಕೊಳಪಡುವ ಪ್ರಾಧಿಕಾರಕ್ಕೆ ಒಂದು ನಿರ್ದಿಷ್ಟ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಯಾವುದೇ ಮಾರ್ಗಸೂಚಿ ಅಥವಾ ನಿರ್ದೇಶನವನ್ನು ನೀಡುವುದಕ್ಕೆ ಒಬ್ಬ ಹಿರಿಯ ಅಧಿಕಾರಿಗೂ ಕೂಡ ಸಾಧ್ಯವಿಲ್ಲ."

7. (2011) 5 ಎಸ್‌ಸಿಸಿ 435

***ವಿಜಯ್ ಸಿಂಗ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ ಸರ್ಕಾರ ಮತ್ತು ಇತರರು***[8];

> ''14. ಇದರಲ್ಲಿ ಒಳಗೊಂಡಿರುವ ಪ್ರಶ್ನೆಯನ್ನು ಮತ್ತೊಂದು ಕೋನದಲ್ಲಿ ಪರಿಶೀಲಿಸುವುದೂ ಕೂಡ ಅಗತ್ಯವಿದೆ. ಇಲಾಖಾ ವ್ಯವಹರಣೆಗಳನ್ನು ನಡೆಸುವುದು ಮತ್ತು ಯಾರೇ ಕರ್ತವ್ಯಚ್ಯುತಿ ಅಧಿಕಾರಿಯ ವಿರುದ್ಧದ ದೋಷ ನಿರ್ಣಯವನ್ನು ದಾಖಲಿಸುವುದು ಮತ್ತು ಅದಕ್ಕಾಗಿ ದಂಡನೆಯನ್ನು ವಿಧಿಸುವುದು ಅರೆ–ನ್ಯಾಯಿಕ ಪ್ರಕಾರ್ಯವಾಗುತ್ತದೆಯೇ ಹೊರತು ಅದು ಆಡಳಿತಾತ್ಮಕವಾದ ಪ್ರಕಾರ್ಯವಲ್ಲ. (ನೋಡಿ: ಬಚ್ಚಿತ್ತಾರ್ ಸಿಂಗ್ –ವಿರುದ್ಧ– ಪಂಜಾಬ್ ರಾಜ್ಯ ಸರ್ಕಾರ, ಎಐಆರ್ 193 ಎಸ್‌ಸಿ 395; ಯೂನಿಯನ್ ಆಫ್ ಇಂಡಿಯಾ –ವಿರುದ್ಧ– ಹೆಚ್.ಸಿ. ಗೋಯಲ್, ಎಐಆರ್ 1964 ಎಸ್‌ಸಿ 364, ಮೊಹಮ್ಮದ್ ಯೂನಸ್ ಖಾನ್ –ವಿರುದ್ಧ– ಉತ್ತರ ಪ್ರದೇಶ್ ರಾಜ್ಯ ಸರ್ಕಾರ, (2010) 10 ಎಸ್‌ಸಿಸಿ 539; ಮತ್ತು ಚೇರ್‌ಮನ್ –ಕಂ– ಮ್ಯಾನೇಜಿಂಗ್ ಡೈರೆಕ್ಟರ್, ಕೋಲ್ ಇಂಡಿಯಾ ಲಿಮಿಟೆಡ್ –ವಿರುದ್ಧ– ಅನಂತ ಸಹಾ, (2011) 5 ಎಸ್‌ಸಿಸಿ 142).
>
> 15. ಕರ್ತವ್ಯಚ್ಯುತಿಯು ರುಜುವಾತಾಗಿರುವುದಕ್ಕೆ ದಂಡನೆ ವಿಧಿಸುವುದನ್ನು ಶಾಸನಾತ್ಮಕ ನಿಯಮಗಳು ವಿನಿಯಮಿಸುತ್ತವೆ ಮತ್ತು ನಿಯಂತ್ರಿಸುತ್ತವೆ. ಆದ್ದರಿಂದ, ಅರೆ–ನ್ಯಾಯಿಕ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಯಾವ ಶಾಸನಾತ್ಮಕ ನಿಯಮಗಳ ಅಡಿಯಲ್ಲಿ ದಂಡನೆಯನ್ನು ವಿಧಿಸಬೇಕಾಗುತ್ತದೆಯೋ ಆ ಶಾಸನಾತ್ಮಕ ನಿಯಮಗಳನ್ನು

8. (2012) 5 ಎಸ್‌ಸಿಸಿ 242

ಕಡೆಗಣಿಸುವುದಕ್ಕೆ ಪ್ರಾಧಿಕಾರಕ್ಕೆ ಯಾವುದೇ ಅವಕಾಶವಿರುವುದಿಲ್ಲ. ಶಿಸ್ತು ಪ್ರಾಧಿಕಾರವು ಸದರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಬದ್ಧವಾಗಿರಬೇಕಾಗುತ್ತದೆ. ಹಾಗಾಗಿ, ಶಾಸನಾತ್ಮಕ ನಿಯಮಗಳ ವ್ಯಾಪ್ತಿಯಿಂದ ಹೊರತಾದ ದಂಡನಾದೇಶವು ಕಾನೂನು ಬಲವಿಲ್ಲದಂತಾಗುತ್ತದೆ ಮತ್ತು ಅದನ್ನು ಮೇಲ್ಮನವಿದಾರನ ವಿರುದ್ಧ ಚಲಾಯಿಸಲಾಗದು.''

***ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು –ವಿರುದ್ಧ– ಬಿ.ವಿ. ಗೋಪಿನಾಥ್*** [9];

''43. ಇಂದಿರಾ ಜೈಸಿಂಗ್ ಅವರ ವಾದವನ್ನು ಒಪ್ಪಿಕೊಳ್ಳುವುದು ಡೆಲಿಗೇಟಸ್ ನಾನ್ ಪ್ರೊಟೆಸ್ಟ್ ಡೆಲಿಗೇರ್ (ಅಥವಾ ಡೆಲಿಗರಿ) ತತ್ವಕ್ಕೆ (ಪ್ರತ್ಯುಯೋಜಿತ ಅಧಿಕಾರವನ್ನು ಮತ್ತು ಪ್ರತ್ಯುಯೋಜಿಸಲಾಗದು ಎಂಬ ತತ್ವ) ವಿರುದ್ಧವಾಗುತ್ತದೆ. ಈ ತತ್ವವನ್ನು ''ಜುಡಿಷಿಯಲ್ ರಿವ್ಯೂ ಆಫ್ ಅಡ್ಮಿನಿಸ್ಟ್ರೇಟಿವ್ ಆಕ್ಷನ್'' – ಡೀ ಸ್ಮಿತ್, ವೂಲ್ಫ್ ಅಂಡ್ ಜ್ಯೂವೆಲ್ (ಐದನೇ ಆವೃತ್ತಿ) ಲೇಖನದಲ್ಲಿ ಸಾರಾಂಶರೂಪದಲ್ಲಿ ತಿಳಿಸಲಾಗಿದ್ದು, – ಅದು ಈ ಕೆಳಕಂಡಂತಿದೆ:–

''ಪ್ರತ್ಯಾಯೋಜನೆ ವಿರುದ್ಧದ ನಿಯಮ

ಸಾಮಾನ್ಯವಾಗಿ ವಿವೇಚನಾಧಿಕಾರವನ್ನು ಯಾವ ಪ್ರಾಧಿಕಾರಕ್ಕೆ ಅದನ್ನು ಬದ್ಧಗೊಳಿಸಲಾಗಿದೆಯೋ ಅದೇ ಪ್ರಾಧಿಕಾರವೇ ಚಲಾಯಿಸಬೇಕು. ಒಬ್ಬ ವ್ಯಕ್ತಿಯ ವೈಯಕ್ತಿಕ ನಿರ್ಣಯ ಮತ್ತು ವಿವೇಚನೆಯಲ್ಲಿ ನಂಬಿಕೆಯಿದೆಯೆಂಬುದನ್ನು ಸೂಚಿಸುವ ಪರಿಸ್ಥಿತಿಯಲ್ಲಿ ಆತನ ಮೇಲೆ ವಿಶ್ವಾಸವಿಟ್ಟು ಆತನಿಗೆ ಅಧಿಕಾರವನ್ನು ಒಪ್ಪಿಸಿರುವಾಗ, ಅದನ್ನು ಇತರರಿಗೆ ಪ್ರತ್ಯಾಯೋಜಿಸಲು ಆತನಿಗೆ

9. ಎಐಆರ್ 2014 ಎಸ್‌ಸಿ 88

ವ್ಯಕ್ತ ರೂಪದಲ್ಲಿ ಅಧಿಕಾರ ನೀಡಿದ್ದ ಹೊರತು, ಆತನು ಆ ಅಧಿಕಾರವನ್ನು ಖುದ್ದಾಗಿಯೇ ಚಲಾಯಿಸಬೇಕು ಎಂಬುದು ಸರ್ವವಿದಿತವಾದ ಕಾನೂನಿನ ಮೂಲತತ್ವವಾಗಿದೆ."

ಅದೇ ಮೂಲತತ್ವವನ್ನು "ಅಡ್ಮಿನಿಸ್ಟ್ರೇಟಿವ್ ಲಾ" ಹೆಚ್‌ಡಬ್ಲ್ಯೂಆರ್ ವೇಡ್ ಮತ್ತು ಸಿ.ಎಫ್. ಫಾರ್ಸಿತ್ (ಒಂಬತ್ತನೇ ಆವೃತ್ತಿ) ಇದರ 10ನೇ ಅಧ್ಯಾಯದಲ್ಲಿ ಈ ಕೆಳಕಂಡಂತೆ ವಿವರಿಸಲಾಗಿದೆ:–

"ಪರಭಾರೆ ಮಾಡಲಾಗದ ವಿವೇಚನಾಧಿಕಾರ

ಅಧಿಕಾರವನ್ನು ಕಾನೂನುಬದ್ಧವಾಗಿ ಚಲಾಯಿಸುವುದಕ್ಕೆ ಅತ್ಯಗತ್ಯವಾದ ಮೂಲಭೂತವಾದ ಅಂಶ ಯಾವುದೆಂದರೆ, ಯಾರಿಗೆ ಆ ಅಧಿಕಾರವನ್ನು ಪ್ರದತ್ತಗೊಳಿಸಲಾಗಿದೆಯೋ ಆ ಪ್ರಾಧಿಕಾರಿಯು ಅದನ್ನು ಚಲಾಯಿಸಬೇಕೇ ಹೊರತು ಬೇರೆ ಯಾರೂ ಅದನ್ನು ಚಲಾಯಿಸಬಾರದು ಎಂಬುದಾಗಿದೆ. ಅದು ಆಡಳಿತಾತ್ಮಕ ಅನಾನುಕೂಲತೆಯನ್ನು ಉಂಟು ಮಾಡಿದರೂ ಕೂಡ ಆ ಅಧಿಕಾರವನ್ನು ಪ್ರತ್ಯಾಯೋಜಿಸಬಹುದೆಂಬ ಆಲೋಚನೆಯನ್ನು ಹೊಂದಲಾಗಿದೆ ಎಂದು ಸೂಕ್ತ ಊಹೆಯನ್ನು ಮಾಡಬಹುದಾದ ಸಂದರ್ಭಗಳಲ್ಲಿ ಹೊರತು ಈ ಮೂಲತತ್ವವನ್ನು ಕಟ್ಟುನಿಟ್ಟಾಗಿ ಅನ್ವಹಿಸಲಾಗಿದೆ. ಸಾಮಾನ್ಯವಾಗಿ, ಅಧಿಕಾರವನ್ನು ಧಾರೆಯೆರೆಯುವ ಪ್ರಾಧಿಕಾರವು ವ್ಯಕ್ತವಾಗಿಯೇ ಅಧಿಕಾರ ನೀಡಿದ್ದರೂ, ಶಾಸನದಲ್ಲಿ ತಿಳಿಸಿದ ನಿಷ್ಕೃಷ್ಟ ವ್ಯಕ್ತಿ ಅಥವಾ ನಿಕಾಯವು ಆ ಅಧಿಕಾರವನ್ನು ಚಲಾಯಿಸಬೇಕೆಂದು ಅಗತ್ಯಪಡಿಸಿರುವಲ್ಲಿ ಮತ್ತು ಏಜೆಂಟ್‌ಗಳು, ಉಪ–ಸಮಿತಿಗಳು ಅಥವಾ ಪ್ರತಿನಿಧಿಗಳು ಕೈಗೊಂಡ ಕ್ರಮವು ಅಧಿಕಾರಾತೀತವಾದುದೆಂದು ಅದನ್ನು ನಿಷಿದ್ಧಗೊಳಿಸುವಲ್ಲಿ, ನ್ಯಾಯಾಲಯಗಳು ಕಠಿಣ ನಿಲುವನ್ನು ತಾಳುತ್ತವೆ."

44. ಈ ಮೂಲತತ್ವಕ್ಕೆ (ಮೇಲೆ ಹೇಳಿದ) ಸಾಹ್ನಿ ಸಿಲ್ಕ್ ಮಿಲ್ಸ್ (ಪ್ರೈ.) ಲಿಮಿಟೆಡ್ (1994 ಎಐಆರ್ ಎಸ್‌ಸಿಡಬ್ಲ್ಯೂ 3832) ಮೊಕದ್ದಮೆಯಲ್ಲಿ ಮನ್ನಣೆ ನೀಡಿದ್ದು, ಅದರಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ಪಡಲಾಗಿದೆ:

> ''6. ನಿಸ್ಸಂದೇಹವಾಗಿ ಶಾಸನದಲ್ಲಿಂಯೆ, ಅಧಿಕಾರ ಪ್ರತ್ಯಾಯೋಜಿತವಾದವನು ಆ ಅಧಿಕಾರವನ್ನು ಯಾವ ಚೌಕಟ್ಟಿನಲ್ಲಿ ಚಲಾಯಿಸಬೇಕೋ ಆ ಚೌಕಟ್ಟಿನೊಳಗೆ ಕಾರ್ಯನೀತಿಯನ್ನು ತೋರಿಸಿದ ನಂತರ, ಯಾವುದೇ ಶಾಸನಾತ್ಮಕ ಪ್ರಾಧಿಕಾರವು ತನ್ನ ಅಧಿಕಾರವನ್ನು ಯಾವುದೇ ಇತರ ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಲು ಶಾಸಕಾಂಗವು ಅನುಮತಿಸಬಹುದೆಂಬುದು ಈಗಾಗಲೇ ಬಹುತೇಕ ಇತ್ಯರ್ಥವಾಗಿರುವ ಅಂಶವಾಗಿದೆ. ನೈಜವಾದ ಸಮಸ್ಯೆ ಅಥವಾ ವಿವಾದ ಉದ್ಭವಿಸುವುದು ಉಪ–ಪ್ರತ್ಯಾಯೋಜನೆ ಮಾಡಬೇಕೆಂದುಕೊಂಡ ಸಂದರ್ಭದಲ್ಲಿ. ಒಂದು ಪ್ರಕಾರ್ಯವನ್ನು ನಿರ್ವಹಿಸಲು ಸಂಸತ್ತು ನಿರ್ಧಿಷ್ಟವಾಗಿ ಒಂದು ಪ್ರಾಧಿಕಾರವನ್ನು ನೇಮಕಮಾಡಿದಾಗ, ಆ ಪ್ರತಿನಿಧಿಯು ತನ್ನ ಸ್ಥಾನದಲ್ಲಿ ಮತ್ತೊಬ್ಬ ವ್ಯಕ್ತಿ ಅಥವಾ ನಿಕಾಯಕ್ಕೆ ಅಧಿಕಾರ ನೀಡಲು ಮುಕ್ತವಾಗಿರಬೇಕು ಎಂದು ಸಂಸತ್ತು ಉದ್ದೇಶಿಸಿತ್ತು ಎಂದು ತಕ್ಷಣದ ಊಹೆ ಮಾಡಲು ಸಾಧ್ಯವಿಲ್ಲ ಎಂದು ಹೇಳಲಾಗಿದೆ.''

ಮೇಲ್ಕಂಡ ಮೂಲತತ್ವವು ಪ್ರಸ್ತುತ ಮೊಕದ್ದಮೆಗೆ ಅನ್ವಯವಾಗುತ್ತದೆ.

20. ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ. ''ಎ'' ಮತ್ತು ''ಬಿ'' ಅನುಬಂಧಗಳಲ್ಲಿ ಕಾಣಿಸಿದಂತೆ ಅನುಕ್ರಮವಾಗಿ 1 ಮತ್ತು 2 ನೇ ಎದುರುದಾರರು ಹೊರಡಿಸಿದ ದಿನಾಂಕ 29.05.2014 ರ ಪ್ರಶ್ನಿತ ಆದೇಶ ಮತ್ತು ದಿನಾಂಕ 12.06.2014 ರ ಆರೋಪ ಪಟ್ಟಿ ಎರಡನ್ನೂ ರದ್ದುಪಡಿಸಲಾಗಿದೆ. ವೆಚ್ಚಗಳ ಬಗ್ಗೆ ಆದೇಶವಿಲ್ಲ.